

## ರೋಸ್ ರೈನ್ ಲಿಲ್ಲಿ

ಹಲವು ಹೂ ಪ್ರಭೇದಗಳನ್ನು ದೇವರ ಪೂಜೆಗೆ ಅಥವಾ ಅಲಂಕಾರಕ್ಕೆ ನಮ್ಮ ಮನೆ ಹೂ ತೋಟದಲ್ಲಿ ಬೆಳೆಸುತ್ತೇವೆ. ಅದರಲ್ಲಿ ರೈನ್ ಲಿಲ್ಲಿ ಹೂವು ಸೇರಿದೆ. ರೋಸ್ ರೈನ್ ಲಿಲ್ಲಿಯು ಕೊಲಂಬಿಯಾಕ್ಕೆ ಹತ್ತಿರವಾದ ಸಸ್ಯದ ಜಾತಿಗೆ ಸೇರಿದ ತಳಿಯಾಗಿದೆ. ಹೆಸರೇ ಹೇಳುವಂತೆ ಗುಲಾಬಿ ಮಳೆ ಲಿಲ್ಲಿ, ಸಸ್ಯವು ಮಳೆಯ ಹನಿ ಬಿದ್ದ ನಂತರದಲ್ಲಿ ತುಸು ಕೆಂಪು ಬಣ್ಣದಲ್ಲಿ ಚಿಕ್ಕದಾದ ಹೂವನ್ನು ಬಿಡುತ್ತದೆ. ನಂತರ ಗುಲಾಬಿ ಬಣ್ಣಕ್ಕೆ ತಿರುಗುತ್ತದೆ. ಇದನ್ನು ಹೆಚ್ಚಿನ ಮಳೆಗಾಗಿ ಕಾಯುವ ಹೂವು ಎಂದರೂ ತಪ್ಪಿಲ್ಲ. ಗಾರ್ಡನ್ ಹಾಗೂ ಮನೆಯ ಅಂದ ಹೆಚ್ಚಿಸಲು ರೈನ್ ಲಿಲ್ಲಿ ಎಲ್ಲೆಡೆ ನೆಡುವುದು ಸಹಜ. ಪಿಂಕ್ ರೈನ್ ಲಿಲ್ಲಿ, ಯೆಲ್ಲೊ ರೈನ್ ಲಿಲ್ಲಿ, ವೈಟ್ ರೈನ್ ಲಿಲ್ಲಿ, ಬಣ್ಣಗಳ ವ್ಯತ್ಯಾಸದಲ್ಲಿ ರೈನ್ ಲಿಲ್ಲಿ ಹೆಸರು ಬದಲಾಗುತ್ತದೆ. ಈರುಳ್ಳಿ ಆಕಾರದ ಕಾಂಡವನ್ನು ಹೊಂದಿರುವುದು ಇವುಗಳ ವಿಶೇಷ. ಚಪ್ಪಟೆಯಾಕಾರದ ಕಪ್ಪು ಬೀಜವನ್ನು ಇದು ಹೊಂದಿದೆ.

–ಸುಮನಾ, ಬಾಯರು

## ಗೊಂಬೆ ಹೂವಿನ ಜಡೆ

ಬಸ್ಸಿನಲ್ಲಿ ಹೋಗುವಾಗ 'ಗೊಂಬೆ ಹೂ ಜಡೆ... ಗೊಂಬೆ ಹೂ ಜಡೆ ನೋಡಜ್ಜಿ' ಎಂದು ಮೊಮ್ಮಗಳು ಕೈಮಾಡಿ ತೋರಿಸಿದಳು. ಗಮನಿಸಿದಾಗ ಬಸ್ಸಿನ ಮುಂದಿನ ಸೀಟಲ್ಲಿದ್ದ ಮಹಿಳೆಯೊಬ್ಬರು ಹೂವು ಮುಡಿದಿದ್ದನ್ನು ನೋಡಿ, 'ಗೊಂಬೆ ಹೂ ಜಡೆ' ಎಂದು ಮೊಮ್ಮಗಳು ಹೇಳಿದ್ದು ಗೊತ್ತಾಯ್ತು. ನಮ್ಮನೆ ಕೈ ತೋಟದಲ್ಲಿ ಅರಳುವ ಈ ಹೂವಿಗೆ ಐದು ಬಿಳಿ ದಳಗಳಿವೆ. ಎರಡು ದಳ ಕೈಗಳಂತೆ, ಎರಡು ದಳ ಕಾಲುಗಳಂತೆ ಹಾಗೂ ಮತ್ತೊಂದು ದಳದ ಮೇಲೆ ಗುಲಾಬಿ ಚುಕ್ಕೆಗಳನ್ನು ಹೊಂದಿರುವ ಈ ಹೂವು ನೋಡಲು ಗೊಂಬೆಯಂತೆ ಕಾಣುವ ಕಾರಣಕ್ಕೆ ಮೊಮ್ಮಗಳು ಇಟ್ಟ ಹೆಸರೇ 'ಗೊಂಬೆ ಹೂವು'. ಇದರ ನಿಜವಾದ ಹೆಸರು 'ಗೋಕರ್ಣ ಮಲ್ಲಿಗೆ'.

ಕೇರಳದಲ್ಲಿ ಹೆಚ್ಚಾಗಿ ಕಂಡುಬರುವ ಈ ಹೂವು, ಸುಮಾರು 200 ಜಾತಿಯ ಮಲ್ಲಿಗೆಗಳ ಪೈಕಿ ಒಂದು. ಇದರ ವೈಜ್ಞಾನಿಕ ಹೆಸರು ಸ್ಯೂಡೆರಾಂಥೆಮಮ್ ಕಾರ್ರುಥರ್ಸಿ (**Pseuderanthemum carruthersii** ), ಇದನ್ನು ಚುಕ್ಕಿ ಮಲ್ಲಿಗೆ ಎಂದೂ ಕರೆಯಲಾಗುತ್ತದೆ. ಈ ಸಸ್ಯಗಳನ್ನು ಉದ್ಯಾನಗಳಲ್ಲಿ ಅಲಂಕಾರಿಕ ಸಸ್ಯಗಳಾಗಿ ಬೆಳೆಸಲಾಗುತ್ತದೆಯೇ ಹೊರತು ನಮ್ಮಲ್ಲಿ ಈ ಹೂವನ್ನು ಮಹಿಳೆಯರು ಮುಡುವುದಿಲ್ಲ. ದೇವರಿಗೂ ಅರ್ಪಿಸುವುದಿಲ್ಲ. ಹೀಗಾಗಿ, ಸಹಪ್ರಯಾಣಿಕಿ ಮುಡಿದ ಹೂವು ನೋಡಿದ ಮೊಮ್ಮಗಳಿಗೆ, ನನಗೆ ಅದು ವಿಶೇಷವೆನಿಸಿತ್ತು.

–ಅನುರಾಧ ಟಿ., ದಾವಣಗೆರೆ







## ಆಕ್ಸಿಜನ್ ಗಣಪನ ಪರಿಸರ ಕಾಳಜಿ

ರಾಯಚೂರಿನ ತಂಡವೊಂದು ಗಣಪನ ಪ್ರತಿಷ್ಠಾಪನೆಯಲ್ಲಿ ವಿಭಿನ್ನತೆ ಮೆರೆಯುವುದರ ಜೊತೆಗೆ ಪರಿಸರ ಕಾಳಜಿಯ ಸಂದೇಶವನ್ನೂ ರವಾನಿಸಿದ್ದಾರೆ. ಮಣ್ಣು ಮತ್ತು ಕಟ್ಟಿಗೆಯಿಂದ ಗಣೇಶ ಮೂರ್ತಿಯನ್ನು ಮಾಡಲಾಗಿದೆ. ಇಲ್ಲಿ ಗಣೇಶನು ಗುಹೆಯಲ್ಲಿ ವಾಸವಿರುವಂತೆ, ಹೊರಗಡೆ ಗುಡ್ಡಗಳ ಹಿಮಾಲಯ ಕೇದಾರನಾಥ ಮಾದರಿಯನ್ನು ಮಾಡಲಾಗಿದೆ. ಗುಡ್ಡದ ಒಳಗೆ ಹೋದರೆ ಹಸಿರೆಲೆ, ಬಳ್ಳಿಗಳು, ಇಳಿಬಿದ್ದ ಬೇರುಗಳ ಜೊತೆ ಶಾಂತಚಿತ್ತನಾಗಿ ಕುಳಿತ ನ್ಯಾಚುರಲ್ ವಿನಾಯಕನ ದರ್ಶನವಾಗುತ್ತದೆ. ಗಣೇಶನ ಮೇಲೆ ಹದ್ದು, ಹಾವು, ನವಿಲುಗಳನ್ನು ಕಾಣಬಹುದು. ನೈಸರ್ಗಿಕ ರೂಪದಲ್ಲಿನ ಈ ವಿಭಿನ್ನ ರೂಪದ ಗಣೇಶ ಸಾರ್ವಜನಿಕರಿಗೆ ಬಹಳ ಮೆಚ್ಚುಗೆ ಆಗಿದೆ. ಹತ್ತು ಅಡಿಯ ಮೂರ್ತಿ ಇದಾಗಿದ್ದು, ಮಹಾರಾಷ್ಟ್ರದಿಂದ ಆಮದು ಮಾಡಿಕೊಳ್ಳಲಾಗಿದೆ. ಸಾಗರ್ ಪರಾತೆ ಎಂಬ ಕಲಾವಿದ ಇದನ್ನು ನಿರ್ಮಿಸಿದ್ದು, ಇದಕ್ಕೆ 'ಆಕ್ಸಿಜನ್ ಗಣೇಶ' ಎಂದು ಹೆಸರಿಡಲಾಗಿದೆ. ಇಲ್ಲಿ ಸೂಕ್ಷ್ಮವಾಗಿ ಮನವಿಟ್ಟು ಆಲಿಸಿದರೆ ಈ ವಿಶೇಷ ಗಣೇಶನು ನಮ್ಮೊಂದಿಗೆ ಮಾತಾಡಿದಂತೆ ಕೇಳುತ್ತದೆ. ಗಿಡಮರಗಳ ನಾಶ ತಪ್ಪಿಸುವಂತೆ, ಪ್ರಾಣಿ, ಪಕ್ಷಿಗಳನ್ನು ಉಳಿಸುವಂತೆ, ಪ್ರಕೃತಿಯನ್ನು ಸಂರಕ್ಷಿಸಿ ಎಂದು ಹೇಳುತ್ತಿರುವಂತೆ ಭಾಸವಾಗುತ್ತದೆ.

–ಈರಣ್ಣ ಬೆಂಗಾಲಿ, ರಾಯಚೂರು